# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಸ್ವಾಮಿ ವೀರೇಶಾನಂದ


## ಭಾಗ ೬

### ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣ

ವಿಶ್ವಧರ್ಮ ಸಮ್ಮೇಳನವು ಚಿಕಾಗೋದಲ್ಲಿ ಸೆಪ್ಟೆಂಬರ್ ೧೧, ೧೮೯೩ರಂದು ಆರಂಭವಾಯಿತು. ಅದರ ಮೊದಲ ದಿನದ ಸಂಭ್ರಮವನ್ನು, ಸಭಾಂಗಣದ ಸೌಂದರ್ಯವನ್ನು ಮತ್ತು ವೇದಿಕೆಯ ಮೇಲೆ ನೆರೆದಿದ್ದ ಪ್ರತಿನಿಧಿಗಳ ಗಾಂಭೀರ್ಯ ಮತ್ತು ಉನ್ನತದರ್ಜೆಯ ಪೋಷಾಕುಗಳು ಹಾಗೂ ಘನತೆವೆತ್ತ ನಡವಳಿಕೆಯನ್ನು ಹಿಂದಿನ ಭಾಗದಲ್ಲಿ (ಆಗಸ್ಟ್ ೨೦೨೧ ರ ಸಂಚಿಕೆ) ವಿವರವಾಗಿ ತಿಳಿದುಕೊಂಡಿದ್ದೆವು. ಇನ್ನು ವೇದಿಕೆಯ ಮುಂದುಗಡೆ ಸೇರಿದ್ದ ನೂರಾರು ಜನರ ಪ್ರತಿಕ್ರಿಯೆ ಹೇಗಿತ್ತು ಎನ್ನುವುದನ್ನು ಅರಿತುಕೊಳ್ಳೋಣ.

ಹೌಟನ್ ಎನ್ನುವ ಬರಹಗಾರನು ಹೀಗೆ ಬರೆಯುತ್ತಾನೆ: ''ಇಂಥ ಅದ್ಭುತ ಸನ್ನಿವೇಶವು ಜಗತ್ತಿನ ಇತಿಹಾಸದಲ್ಲಿ ಹಿಂದೆ ಎಂದೂ, ಯಾರೂ ಕಂಡಿರಲಿಲ್ಲ.'' ಸ್ವಾಮಿ ವಿವೇಕಾನಂದರು ಕೂಡ ಈ ದೃಶ್ಯವನ್ನು ಕಂಡು ಮುಗ್ಧರಾಗಿ ಹೋದರು. ಅವರೇ ಮುಂದೆ ತಮ್ಮ ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ: ''ನನ್ನ ಹೃದಯವು ಇದನ್ನು ನೋಡಿ ಕಂಪಿಸುತ್ತಿತ್ತು. ನನ್ನ ನಾಲಗೆಯು ಬಹುತೇಕ ಒಣಗಿಹೋಗಿತ್ತು.'' ಈ ಮಾತುಗಳಲ್ಲಿ ಆಶ್ಚರ್ಯವನ್ನು ತರುವ ಅಂಶವೇನೂ ಇರಲಿಲ್ಲ. ಏಕೆಂದರೆ, ಸ್ವಾಮೀಜಿಯವರ ಸುತ್ತಲೂ ಜಗತ್ತಿನ ಪ್ರತಿಷ್ಠಿತ ಧಾರ್ಮಿಕ ಮತ್ತು ಆಧ್ಯಾತ್ಮಿಕ ವ್ಯಕ್ತಿಗಳು ನೆರೆದಿದ್ದರು. ಸ್ವಾಮೀಜಿ ಈ ಹಿಂದೆ ಅಮೆರಿಕೆಯಲ್ಲಿ ಸಣ್ಣ ಸಣ್ಣ ಗುಂಪುಗಳಲ್ಲಿ ಭಾಷಣ ಮಾಡಿದ್ದರು. ಆದರೆ ಇಂಥ ಬೃಹತ್ ಸಮಾವೇಶವನ್ನು ಕುರಿತು, ಭಾಷಣ ಮಾಡಿದ್ದಿರಲಿ, ಒಂದು ಸಲ ಕೂಡ ನೋಡಿಯೂ ಇರಲಿಲ್ಲ.

ಘನತೆವೆತ್ತ ಪ್ರತಿನಿಧಿಗಳೆಲ್ಲರೂ ವೇದಿಕೆಯ ಮೇಲೆ ಆಸೀನರಾದರು. ಹಠಾತ್ತಾಗಿ, ಆರ್ಗನ್ ವಾದ್ಯವು ಮೊಳಗಿತು. ಎಲ್ಲರೂ ಅದರ ನಿನಾದದ ಹಿನ್ನೆಲೆಯಲ್ಲಿ ಪ್ರಾರ್ಥನಾ ಗೀತೆಯನ್ನು ಹಾಡಿದರು. ಅದರ ಸಾರಾಂಶ ಹೀಗಿತ್ತು: 'ಎಲ್ಲ ಆಶೀರ್ವಾದಗಳೂ ಹೊರಹೊಮ್ಮುವ ಭಗವಂತನ ಸ್ತವನವನ್ನು ಮಾಡೋಣ. ಸ್ವರ್ಗ ನಿವಾಸದಲ್ಲಿ ಅವನಿದ್ದಾನೆ, ಅವನಿಗೆ ಸ್ತುತಿಯನ್ನು ಮಾಡೋಣ. ದಿವ್ಯಪಿತ, ದಿವ್ಯಪುತ್ರ ಮತ್ತು ದಿವ್ಯಭೂತಗಳಿಗೆ ನಮ್ಮ ಸ್ತವನಗಳಿರಲಿ.'' ಈ ಕ್ರೈಸ್ತಪ್ರಾರ್ಥನೆಯ ಜೊತೆಗೆ ಎಲ್ಲ ಸಭಿಕರೂ ದನಿಗೂಡಿಸಿದರು. ಹಾಗೆಯೇ ಇನ್ನೂ ಹಲವಾರು ಪ್ರಾರ್ಥನಾ ಗೀತೆಗಳನ್ನು ಪಠಿಸಲಾಯಿತು. ಪಠಣದ ನಂತರ ಕಾರ್ಡಿನಲ್ ತನ್ನ ಕೈಯನ್ನು ಮೇಲೆತ್ತಿದನು. ನಿಶ್ಶಬ್ದತೆ ಇಡೀ ಸಭಾಂಗಣವನ್ನು ಆವರಿಸಿತು. ಭಗವಂತನ ಪ್ರಾರ್ಥನೆಯನ್ನು ಕಾರ್ಡಿನಲ್ ಉಚ್ಚರಿಸಿದನು. ಸಭಿಕರೆಲ್ಲರೂ ಇದಕ್ಕೆ ಮಾರ್ದನಿಸಿದರು. ಹೌಟನ್ ಬರೆಯುತ್ತಾನೆ: '೧೯ನೆಯ ಶತಮಾನದ ಅತ್ಯಂತ ಶ್ರೇಷ್ಠ ಸನ್ನಿವೇಶದ ಚರಮಸೀಮೆ ಇದಾಗಿತ್ತು.'



ಹಾಲ್ ಆಫ್ ಕೊಲಂಬಸ್, ಆರ್ಟ್ ಇನ್‌ಸ್ಟಿಟ್ಯೂಟ್, ೧೮೯೩

ವಿಶ್ವಧರ್ಮಸಮ್ಮೇಳನದ ಕಾರ್ಯಕ್ರಮಗಳು ಆರಂಭಗೊಂಡವು. ೧೭ ದಿನಗಳ ಕಾಲ ನಿರಂತರವಾಗಿ ಭಾಷಣಗಳು ಜರುಗಿದವು. ಬೆಳಗ್ಗೆ, ಮಧ್ಯಾಹ್ನ, ಸಂಜೆ — ಸತತವಾಗಿ ಭಾಷಣಗಳು ನಡೆಯುತ್ತಲೇ ಇದ್ದವು. ಈ ಸಭೆಗಳಿಗೆ ಬರುತ್ತಿದ್ದ ಜನರ ಸಂಖ್ಯೆ ದಿನದಿನಕ್ಕೂ ಹೆಚ್ಚಾಗುತ್ತಲೇ ಹೋಗುತ್ತಿತ್ತು. ನಾಲ್ಕನೆಯ ದಿನ ಜನರು ಎಷ್ಟು ಹೆಚ್ಚಾದರೆಂದರೆ, ಪಕ್ಕದ ಸಭಾಂಗಣವಾದ ಹಾಲ್ ಆಫ್ ವಾಷಿಂಗ್‌ಟನ್‌ನಲ್ಲಿ ಕೂಡ ಸಭಿಕರಿಗೆ ಅವಕಾಶ ಮಾಡಿಕೊಡಲಾಯಿತು. ಅಲ್ಲದೆ, ಆ ಸಭಾಂಗಣದಲ್ಲಿಯೂ ಭಾಷಣಗಳನ್ನು ಅಕ್ಷರಶಃ ಪುನರಾವರ್ತನೆ ಮಾಡಲಾಯಿತು. ಐದನೆಯ ದಿನ ವಿಶ್ವಧರ್ಮ ಸಮ್ಮೇಳದ ವೈಜ್ಞಾನಿಕ ಸಮಾವೇಶ ಆರಂಭವಾಯಿತು. ಆಗ ಸಮ್ಮೇಳನದ ಮುಖ್ಯ ಕಟ್ಟಡ ಮತ್ತು ಪಕ್ಕದ ಕಟ್ಟಡಗಳ ನಡುವೆ ಜನಗುಂಗುಳಿ ವಿಭಾಗವಾಯಿತು. ಈ ವೈಜ್ಞಾನಿಕ ಸಮಾವೇಶಗಳ ಮುಖ್ಯ ಉದ್ದೇಶ ಪ್ರತಿಯೊಂದು ಧರ್ಮದ ಬಗೆಗಿನ ಮಾಹಿತಿಯನ್ನು ಕಲೆಹಾಕುವುದು ಮತ್ತು ಪರೀಕ್ಷಿಸಿನೋಡುವುದು. ವಿಶ್ವಧರ್ಮ ಸಮ್ಮೇಳನದ ವೈಜ್ಞಾನಿಕ ವಿಭಾಗದ ಅಧ್ಯಕ್ಷನಾಗಿದ್ದ ಮೆರ್ವಿನ್ ಮಾರಿ ಸ್ನೆಲ್ ಅನ್ನುವವನ ಪ್ರಕಾರ ಇದರ ಉದ್ದೇಶ ಧಾರ್ಮಿಕ ಭಿನ್ನತೆಗಳನ್ನು ತೊಡೆದು



ಹಾಕುವುದು ಮತ್ತು ಎಲ್ಲ ಧರ್ಮಗಳ ತತ್ತ್ವಗಳನ್ನು ಮತ್ತು ಅವುಗಳ ಬಗೆಗಿನ ವಾಸ್ತವಿಕ ಸಂಗತಿಯನ್ನು ಪಕ್ಷಾತೀತ ರೂಪದಲ್ಲಿ ಪ್ರಸ್ತುತಪಡಿಸುವುದು.

ಅದೃಷ್ಟವೋ ಎಂಬಂತೆ, ಸಮ್ಮೇಳನವು ವಸಂತಕಾಲದ ಆರಂಭದಲ್ಲಿ ಆರಂಭವಾಗಿತ್ತು. ಆಗ ಅಷ್ಟೊಂದು ಸೆಖೆ ಇರಲಿಲ್ಲ. ಹವಾಮಾನ ಹಿತಕರವಾಗಿತ್ತು. ಕೆಲವು ದಿನ ಮಳೆಗಾಳಿಯ ಅಬ್ಬರ ಹೆಚ್ಚಾಗಿಯೇ ಇತ್ತು. ಒಂದು ದಿನ ಮಳೆಯು ಸಭಾಂಗಣದ ಒಳಗೇ ರಾಚಿತು. ಅದರಿಂದ ರಕ್ಷಿಸಿಕೊಳ್ಳಲು ಜನರು ತಮ್ಮ ಕೊಡೆಗಳನ್ನು ಎತ್ತಿಹಿಡಿದರು. ಭಾರೀ ಗಾಳಿಯ ಅಬ್ಬರವು ಭಾಷಣಕಾರರ ಧ್ವನಿಯನ್ನು ಅಡಗಿಸಿತು. ಮಿಕ್ಕ ದಿನಗಳಲ್ಲಿ ಹತ್ತಿರದಲ್ಲಿ ಇದ್ದ ರೈಲ್ವೇ ನಿಲ್ದಾಣದ ರೈಲಿನ ಸದ್ದು ಕೂಡ ಕೇಳಿಸುತ್ತಿತ್ತು. ಇದೇನೂ ಅಷ್ಟೊಂದು ತೊಂದರೆಯನ್ನು ಉಂಟುಮಾಡಲಿಲ್ಲವೆಂದೇ ಕಾಣಿಸುತ್ತದೆ.

ಮೊದಲ ದಿನದ ಕಾರ್ಯಕ್ರಮ ಸುದೀರ್ಘವಾಗಿತ್ತು. ಅಂದು ಸಮ್ಮೇಳನದ ಅಧಿಕಾರಿಗಳು ಸ್ವಾಗತ ಭಾಷಣಗಳನ್ನು ಮಾಡಿದರು. ಹಾಗೆಯೇ ಪ್ರತಿನಿಧಿಗಳು ಅದಕ್ಕೆ ಉತ್ತರವನ್ನು ನೀಡಿದರು. ಅಂದು ೭ ಸ್ವಾಗತ ಭಾಷಣಗಳು ಇದ್ದವು. ಹಾಗೆಯೇ ಇದಾದನಂತರ ಎಂಟು ಸಣ್ಣ ಭಾಷಣಗಳು ಜರುಗಿದವು. ಇಲ್ಲಿಗೆ ಬೆಳಗಿನ ಸಮಾವೇಶ ಮುಗಿಯಿತು. ವಿಶ್ವಧರ್ಮ ಸಮ್ಮೇಳನದಲ್ಲಿ ಭಾಷಣ ಮಾಡಿದ ಮೊಟ್ಟಮೊದಲ ಪ್ರತಿನಿಧಿಯೆಂದರೆ ಗ್ರೀಕ್ ಸಾಂಪ್ರದಾಯಿಕ ಚರ್ಚಿನ ಪ್ರತಿನಿಧಿಯಾದ ಜಾಂಟೆಯ ಆರ್ಚ್‌ಬಿಷಪ್. ಹಾಗೆಯೇ ಬ್ರಹ್ಮಸಮಾಜದ ಪ್ರತಿನಿಧಿಗಳಾಗಿದ್ದ ಪ್ರತಾಪಚಂದ್ರ ಮಜುಂದಾರ್ ಕೂಡ ಉತ್ತಮ ಭಾಷಣವನ್ನು ಮಾಡಿದರು. ಚೀನಾ ದೇಶದ ಪ್ರತಿನಿಧಿಯಾದ ಪುಂಗ್ ಕ್ವಯಾಂಗ್ ಯು ಅವರಂತೂ ಸಭಿಕರನ್ನು ಮುಗ್ಧಗೊಳಿಸಿದರು; ಅವರ ಭಾಷಣವನ್ನು ಕೇಳಿ ಜನರು ತಮ್ಮ ಹ್ಯಾಟುಗಳನ್ನು ಮತ್ತು ಕರವಸ್ತ್ರಗಳನ್ನು ಬೀಸುತ್ತ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಪೌರ್ವಾತ್ಯ ದೇಶದ ಪ್ರತಿನಿಧಿಗಳಲ್ಲಿ ಜನರ ಆಕರ್ಷಣೆಯನ್ನು ಸೆಳೆದ ಮತ್ತೊಬ್ಬ ಪ್ರತಿನಿಧಿಯೆಂದರೆ ಶ್ರೀಲಂಕಾದ ಬೌದ್ಧಭಿಕ್ಷು ಧರ್ಮಪಾಲ ಅವರು. ಅವರನ್ನು ಸ್ವಾಮೀಜಿ ತಮ್ಮ ಪತ್ರಗಳಲ್ಲಿ 'a nice boy' (ಒಳ್ಳೆಯ ಹುಡುಗ) ಎಂದು ಕರೆಯುತ್ತಾರೆ.

ಈ ಎಲ್ಲ ಭಾಷಣಗಳ ಮಧ್ಯೆ ಸ್ವಾಮಿ ವಿವೇಕಾನಂದರು ಕುಳಿತೇ ಇದ್ದರು. ಧ್ಯಾನಮಗ್ನರಾಗಿ ಪ್ರಾರ್ಥನಾಭಾವದಲ್ಲಿ ತಲ್ಲೀನರಾಗಿದ್ದರು. ಮಧ್ಯಾಹ್ನದ ಸಮಾವೇಶವೂ ಆರಂಭವಾಯಿತು. ಅದರಲ್ಲಿ ಕೂಡ ನಾಲ್ಕು ಭಾಷಣಕಾರರು ಭಾಷಣಮಾಡಿದ್ದೂ ಆಯಿತು. ಅವರೆಲ್ಲರೂ ತಾವು ತಯಾರಿಮಾಡಿಕೊಂಡು ಬಂದಿದ್ದ ಪ್ರವಚನಗಳನ್ನು ಓದಿಹೇಳಿದರು. ಕಟ್ಟಕಡೆಗೆ, ದಯಾವಂತರೂ ಪಂಡಿತರೂ ಆದ ಫ್ರೆಂಚ್ ಪಾದ್ರಿ ಜಿ. ಬಾನೆಟ್ ಮೌರಿ ಅವರು ಸ್ವಾಮೀಜಿಯವರನ್ನು ಭಾಷಣವನ್ನು ನೀಡುವಂತೆ ಒತ್ತಾ ಯಿಸಿದರು. ಅವರು ಸ್ವಾಮೀಜಿಯವರ ಪಕ್ಕದಲ್ಲಿಯೇ ಕುಳಿತಿ ದ್ದರು. ಅವರ ಮಾತಿಗೆ ಮಾನ್ಯತೆಯನ್ನು ನೀಡಿ, ಸ್ವಾಮಿ ವಿವೇಕಾ ನಂದರು ಮನಸ್ಸಿನಲ್ಲಿಯೇ ವಿದ್ಯಾಧಿದೇವತೆಯಾದ ಸರಸ್ವತಿಗೆ ನಮಸ್ಕಾರವನ್ನು ಮಾಡಿ, ಎದ್ದುನಿಂತು ಸಭೆಯನ್ನು ಉದ್ದೇಶಿಸಿ, **'ಅಮೆರಿಕದ ಸಹೋದರಿಯರೇ, ಸಹೋದರರೇ'** ಎಂದು ತಮ್ಮ ಭಾಷಣವನ್ನು ಪ್ರಾರಂಭಿಸಿದರು. ಅದು ಅಲ್ಲಿ ನೆರೆದಿದ್ದ ಜನರ ಮೇಲೆ ವಿದ್ಯುತ್ ಸಂಚಾರವನ್ನೇ ಉಂಟುಮಾಡಿತು.

ವಿಶ್ವಧರ್ಮಸಮ್ಮೇಳದ ಅಧಿಕೃತ ವಿವರಣೆಯನ್ನು ನೀಡಿರುವ ಡಾ. ಬರೋಸ್ ಹೀಗೆ ಬರೆಯುತ್ತಾರೆ: ''ಸ್ವಾಮಿ ವಿವೇಕಾನಂದರು ಸಭಾಗಣವನ್ನು ಉದ್ದೇಶಿಸಿ, 'ಅಮೆರಿಕದ ಸಹೋದರಿಯರೇ, ಸಹೋದರರೇ' ಎಂದು ಹೇಳಿದಾಗ, ಹಲವಾರು ನಿಮಿಷಗಳ ಕಾಲ ನಿರಂತರ ಕರತಾಡನವಾಯಿತು.'' ಸ್ವಾಮೀಜಿ ಅವರೇ ಮುಂದೊಮ್ಮೆ ಹೇಳಿಕೊಳ್ಳುತ್ತಾರೆ: ''ಕಿವಿ ಗಡಚಿಕ್ಕುವಂತೆ ಎರಡು ನಿಮಿಷಗಳ ಕಾಲ ಕೈಚಪ್ಪಾಳೆಯ ಸದ್ದು ಕೇಳಿಸುತ್ತಿತ್ತು.'' ಇದೇ ಸಂದರ್ಭದ ಬಗ್ಗೆ ಇನ್ನೊಂದು ಉಲ್ಲೇಖದಲ್ಲಿ ಶ್ರೀಮತಿ ಎಸ್. ಕೆ. ಬ್ಲಡ್‌ಗೆಟ್ ಎನ್ನುವ ಮಹಿಳೆ (ಮುಂದೆ ಲಾಸ್ ಏಂಜಲಿಸ್ ನಗರದಲ್ಲಿ ಸ್ವಾಮೀಜಿಯವರು ಆಕೆಯ ಮನೆಯಲ್ಲಿಯೇ

ಉಳಿದುಕೊಂಡಿದ್ದರು) ಹೇಳುತ್ತಾಳೆ: ''ಈ ಯುವಕನು ಎದ್ದು ನಿಂತು, 'ಅಮೆರಿಕದ ಸಹೋದರಿಯರೇ, ಸಹೋದರೇ' ಎಂದು ಹೇಳಿದಾಗ, ಅಲ್ಲಿನೆರೆದಿದ್ದ ಏಳುಸಾವಿರ ಜನರು ಒಮ್ಮೆಲೇ ಎದ್ದು ನಿಂತರು. ಆ ಮೂಲಕ, ತಾವು ಅರಿಯದ ಯಾವುದೇ ಉದಾತ್ತ ತತ್ತ್ವಕ್ಕೆ ತಮ್ಮ ಗೌರವವನ್ನು ಸಲ್ಲಿಸಿದರು. ಭಾಷಣ ಮುಗಿದ ನಂತರ, ಹಲವಾರು ಮಹಿಳೆಯರು ತನ್ನ ಆಸನಗಳನ್ನು ದಾಟಿ, ಆತನನ್ನು ಕಾಣಲು ಹತ್ತಿರ ಹೋಗುತ್ತಿರುವಾಗ, ನಾನು ಅಂದು ಕೊಂಡೆ: 'ಸರಿ, ಹುಡುಗನೇ, ನೀನು ಈ ಆಘಾತವನ್ನು ತಡೆದು ಕೊಳ್ಳಬಲ್ಲೆಯಾದರೆ, ನೀನು ನಿಜವಾಗಲೂ ದೇವರೇ ಸರಿ.' ''

ಸ್ವಾಮಿ ವಿವೇಕಾನಂದರ ಜೀವನದಲ್ಲಿ ದಾಖಲಾಗಿದೆ: ''ಮರುದಿನ ಸ್ವಾಮೀಜಿ ಒಬ್ಬ ಶ್ರೀಮಂತರ ಮನೆಯಲ್ಲಿ ಉಳಿದು ಕೊಂಡಿದ್ದರು. ಆಗ ಭಾರತೀಯರ ಬಡತನ ಮತ್ತು ದೈನ್ಯತೆ ಯನ್ನು ನೆನೆದು ಕಣ್ಣೀರು ಸುರಿಸಿದರು. ತಾವು ಚಿಕಾಗೋದಲ್ಲಿ ಪಡೆದು ಕೊಂಡ ಪ್ರಸಿದ್ಧಿ ಮತ್ತು ಗೌರವಗಳಿಗೆ ಅವರ ಮೊದಲ ಪ್ರತಿಕ್ರಿಯೆ ಇದಾಗಿತ್ತು.''

ಹಾಗೆ ನೋಡಿದರೆ, ಚಿಕಾಗೋದ ಜನತೆ ಕೇವಲ ಸ್ವಾಮೀಜಿ ಯವರಿಗೆ ಮಾತ್ರವೇ ಕರತಾಡನದ ಮೂಲಕ ತಮ್ಮ ಗೌರವ ಪ್ರಶಂಸೆಗಳನ್ನು ವ್ಯಕ್ತಗೊಳಿಸಿದರು ಎಂದು ತಿಳಿಯಬಾರದು. ಅವರಿಗಿಂತ ಮುಂಚೆ ಭಾಷಣ ಮಾಡಿದ ಹಲವರಿಗೆ ಸಭಿಕರು ತಮ್ಮ ಮೆಚ್ಚುಗೆಯನ್ನು ಬಹಳ ಚೆನ್ನಾಗಿಯೇ ತೋರ್ಪಡಿಸಿ ದರು. ಆ ಜನರ ಭೌತಿಕ ಸಂಪ್ರದಾಯದ ಅಂತರಂಗದಲ್ಲಿ ಸುಪ್ತ ಜಲದಂತೆ, ಆಧ್ಯಾತ್ಮಿಕ ತೃಷೆಯು ಕಾಣದಂತೆ ಹರಿಯುತ್ತಿತ್ತು. ಆಧ್ಯಾತ್ಮಿಕತೆಯನ್ನು ಅರ್ಥಮಾಡಿಕೊಳ್ಳಲು ಇದೇನು ಭಾರತ ವಾಗಿರಲಿಲ್ಲವಲ್ಲ! ತಾವು ಸ್ವಾಮೀಜಿಯ ಮೊದಲ ಮಾತುಗಳಿಗೇ ಮುಗ್ಧರಾಗಿಹೋದರು ಎನ್ನುವುದು ಜನರಿಗೇ ತಿಳಿದಿರಲಿಲ್ಲ. ಯಾವುದೋ ಪ್ರಬಲ ಶಕ್ತಿಯೊಂದು ಅವರ ಮನಸ್ಸನ್ನು ಸೂರೆ ಹೊಂದಿತು ಎನ್ನುವುದಷ್ಟು ಸತ್ಯ!

ಜನರು ಪ್ರಶಂಸಿಸಿದ ಇತರ ಭಾಷಣಗಳನ್ನು ನೋಡಿದಾಗ, ಅವುಗಳಲ್ಲಿ ರಾಜಕೀಯ ವಿಷಯವೋ, ಧಾರ್ಮಿಕ ಸಾಮ ರಸ್ಯದ ವಿಷಯವೋ, ರಾಷ್ಟ್ರೀಯ ವಿಚಾರವೋ - ಇಲ್ಲವೇ, ಭಾಷಣಕಾರನು ಈಗಾಗಲೇ ಪ್ರಸಿದ್ಧನಾಗಿರುವನೆಂದೋ- ಜನರು ಆತನ ಬಗೆಗೆ ಆಕರ್ಷಿತರಾದರು. ಆದರೆ ಸ್ವಾಮಿ ವಿವೇಕಾನಂದರ ವಿಷಯದಲ್ಲಿ ಜನರನ್ನು ಸೆಳೆಯುವಂಥ ಯಾವುದೇ ಲೌಕಿಕ ವಿಷಯವೂ ಇರಲಿಲ್ಲ. ಅದೇ ರೀತಿ ಸ್ವಾಮೀಜಿಯವರ ಮೊದಲ ನುಡಿಗಳಿಂದ ಜನರು ಸ್ಫೂರ್ತಿಗೊಂಡರೇ ಎಂದರೆ, ಹಾಗೆಂದೂ ಹೇಳಲು ಆಗುವುದಿಲ್ಲ. ಏಕೆಂದರೆ ವಿಶ್ವಭ್ರಾತೃತ್ವ ಮತ್ತು ಸಹೋ ದರ ಭಾವನೆಗಳನ್ನು ಬೆಳಗ್ಗಿನಿಂದ ಹಲವಾರು ಭಾಷಣಕಾರರು ವ್ಯಕ್ತಪಡಿಸಿದ್ದರು. ಹಾಗಾದರೆ, ಸ್ವಾಮೀಜಿಯ ಮಾತುಗಳಲ್ಲಿ ಇದ್ದ, ಆದರೆ ಇತರ ಭಾಷಣಕಾರರಲ್ಲಿ ಕಾಣಬರದಿದ್ದ, ಅದಾ ವುದೋ ವಿಶಿಷ್ಟ ಅಂಶವೊಂದು ಜನರನ್ನು ಈ ರೀತಿಯಲ್ಲಿ ಹುಚ್ಚೆಬ್ಬಿಸಿತು ಎನ್ನುವುದಂತೂ ಸತ್ಯ. ಅದೇನದು?

ಸ್ವಾಮೀಜಿ ಪ್ರಪ್ರಥಮ ಬಾರಿಗೆ ಇಷ್ಟೊಂದು ಜನಸಮೂಹ ವನ್ನು ಎದುರಿಸಿದ್ದರು. ಹೀಗಾಗಿ ಅವರು ಪಡೆದುಕೊಂಡ ಪ್ರಚಂಡ ಕರತಾಡನವು ಖಂಡಿತವಾಗಿಯೂ ಅವರ ಮಾತು ಗಳಿಂದ ಬಂದಿದ್ದಲ್ಲ. ಮಾತಿನಲ್ಲಿ ಸೆರೆಹಿಡಿಯಲಾಗದ ಆಧ್ಯಾತ್ಮಿಕ ಔನ್ನತ್ಯವೊಂದನ್ನು ಜನತೆಯು ಅವರಲ್ಲಿ ಗುರುತಿಸಿದರು. ಸ್ವಾಮಿ ವಿವೇಕಾನಂದರು ನೆರೆದಿದ್ದ ಅಮೆರಿಕೆಯ ಸಭಿಕರೊಂದಿಗೆ ಆಧ್ಯಾ ತ್ಮಿಕವಾಗಿ ಐಕ್ಯತೆಯನ್ನು ಸಾಧಿಸಿದ್ದರು. ಆ ವಿಶ್ವಾತ್ಮಕತೆಯ ಭಾವವೇ ಅವರು 'ಅಮೆರಿಕದ ಸಹೋದರಿಯರೇ, ಸಹೋ ದರರೇ' ಎಂದು ಉಚ್ಚರಿಸುವ ಸಮಯದಲ್ಲಿ ಅವರ ಮನಸ್ಸನ್ನು ತುಂಬಿಹೋಗಿತ್ತು. ಈ ಪರಿಶುದ್ಧ ಆಧ್ಯಾತ್ಮಿಕ ಚೈತನ್ಯದ ಅಪಾರ ಶಕ್ತಿಯೇ ಜನರ ಮನಸ್ಸನ್ನು ಅವರೆಡೆಗೆ ಸೆಳೆಯಿತು. ಅವರ ಮತ್ತು ಜನತೆಯ ನಡುವೆ ಒಂದು ಬಗೆಯ ಅಪೂರ್ವ ಆಧ್ಯಾ ತ್ಮಿಕ ಸಂಬಂಧವನ್ನು ಉಂಟುಮಾಡಿತು. ಆ ಆಧ್ಯಾತ್ಮಿಕ ಶಕ್ತಿಯ ಆಕರವು ಬಹಳ ಗಂಭೀರವಾಗಿತ್ತು; ಆಲೋಚನೆಗೆ ನಿಲುಕದ್ದಾ ಗಿತ್ತು. ಹೀಗಾಗಿ ಪಾಶ್ಚಿಮಾತ್ಯ ಜಗತ್ತಿನ ಜೊತೆಗೆ ಸ್ವಾಮಿ ವಿವೇಕಾ ನಂದರು ಅವಿನಾಭಾವ ಸಂಬಂಧವನ್ನು ಬೆಳೆಸಿಕೊಂಡರು. ಈ ಎಲ್ಲ ವಿಚಾರಗಳು ಸಭಿಕರಿಗೆ ಆ ಸಮಯದಲ್ಲಿ ಹೊಳೆಯಲೇ ಇಲ್ಲ. ಅವರಿಗೆ ಗೊತ್ತಾಗದ ಹಾಗೆಯೇ ಸ್ವಾಮಿ ವಿವೇಕಾನಂದರು ಪಸರಿಸಿದ ಆಧ್ಯಾತ್ಮಿಕ ಅಲೆಯಲ್ಲಿ ಅವರೆಲ್ಲ ಕೊಚ್ಚಿಹೋಗಿದ್ದರು.

ಸ್ವಾಮಿ ವಿವೇಕಾನಂದರು ನೀಡಿದ್ದು ಬಹಳ ಸಂಕ್ಷಿಪ್ತವಾದ ಭಾಷಣ. ಭಾಷಣ ಮುಗಿಯುತ್ತಿದ್ದಂತೆ, ಮತ್ತೊಂದು ಸರಣಿಯ ಕರತಾಡನ ಸಭಾಂಗಣವನ್ನು ಸೂರೆಗೊಂಡಿತು. ಅಮೆರಿಕೆಯ ಜನರು ತಮ್ಮ ಒಬ್ಬ ಹೊಸ 'ಹೀರೋ' ಅನ್ನು ಸ್ವಾಮಿ ವಿವೇಕಾ ನಂದರಲ್ಲಿ ಕಂಡುಕೊಂಡರು. ಸ್ವಾಮೀಜಿ ಅವರೆಲ್ಲರ ಹೃದಯ ಗಳನ್ನು ಗೆದ್ದಿದ್ದರು. ಅಂದಿನಿಂದ ಅವರು ವಿಶ್ವಧರ್ಮ ಸಮ್ಮೇ ಳನದ ಧ್ರುವ ನಕ್ಷತ್ರವಾಗಿ ಬೆಳಗಿದರು.

ಸ್ವಾಮೀಜಿಯವರ ಭಾಷಣದ ನಂತರ ಇನ್ನೂ ನಾಲ್ಕು ಭಾಷಣ ಗಳಾದವು. ಅದರೊಂದಿಗೆ ಅಂದಿನ ದಿನದ ಕಲಾಪಗಳು ಮುಕ್ತಾಯ ಗೊಂಡವು. ಒಟ್ಟಾರೆ ಅಂದು ೨೪ ಭಾಷಣಗಳಾಗಿದ್ದವು.

ಮರುದಿನ ಹಲವಾರು ಪತ್ರಿಕೆಗಳು ಸ್ವಾಮೀಜಿಯವರ ಗುಣಗಾನವನ್ನು ಮಾಡಿದವು. ಇವುಗಳಲ್ಲದೆ, ಸಮ್ಮೇಳನದ ವೈಜ್ಞಾನಿಕ ವಿಭಾಗದ ಮುಖ್ಯಸ್ಥನಾದ ಮೆರ್ವಿನ್ ಮಾರಿ ಸ್ನೆಲ್ ಮಹಾ ಶಯನು ಹೀಗೆ ಬರೆದನು: ''ಪ್ರಶ್ನಾತೀತವಾಗಿ ಇಡೀ ವಿಶ್ವ ಧರ್ಮ ಸಮ್ಮೇಳನದಲ್ಲಿ ಅತ್ಯಂತ ಪ್ರಸಿದ್ಧನೂ, ಪ್ರಭಾವ ಶಾಲಿಯೂ ಆದ, ಹಾಗೆಯೇ ಎಲ್ಲ ಸಂದರ್ಭಗಳಲ್ಲಿಯೂ, ಬೇರೆಲ್ಲ ಭಾಷಣಕಾರರಿಗಿಂತಲೂ - ಅವರು ಕ್ರೈಸ್ತರಾಗಿರಲಿ, ಇಲ್ಲದಿರಲಿ - ಬಹಳ ಉತ್ಸಾಹದಿಂದ ಜನರು ಮೆಚ್ಚಿದಂಥ ಭಾಷಣಕಾರನೆಂದರೆ ಈತನೇ (ಸ್ವಾಮಿ ವಿವೇಕಾನಂದರು). ''